ಧಾರಾವಾಹಿ


# ಬನ್ನಿ ಬೇಲೂರು ಮಠಕ್ಕೆ

ಸ್ವಾಮಿ ಆಶುತೋಷಾನಂದ

(ಹಿಂದಿನ ಸಂಚಿಕೆಯಿಂದ)

## ಹಳೆಯ ದೇವಮಂದಿರ

ಮಾವಿನ ಮರದ ಉತ್ತರದಿಕ್ಕಿನಲ್ಲಿ ಮೇಲುಗಡೆ ಇರುವ ಹಳೆಯ ಮಂದಿರಕ್ಕೆ ಹೋಗುವ ಮೆಟ್ಟಿಲುಗಳನ್ನು ನೋಡುತ್ತೇವೆ. ನಾವು ಮಂದಿರವನ್ನು ಪ್ರವೇಶಿಸಿದಾಗ, ಎರಡು ಕೊಠಡಿಗಳು ನಮಗೆ ಕಾಣಸಿಗುತ್ತವೆ.


ಬೇಲೂರು ಮಠದ ಹಳೆಯ ಮಂದಿರ

ಎಡಕ್ಕೆ ಇರುವ ಕೊಠಡಿಯು ಶ್ರೀರಾಮಕೃಷ್ಣರ ಗರ್ಭಮಂದಿರ. ಈಗ ಇರುವ ಮುಖ್ಯಮಂದಿರವನ್ನು ಕಟ್ಟುವುದಕ್ಕೆ ಮುಂಚೆ, ಶ್ರೀರಾಮಕೃಷ್ಣರ ಪವಿತ್ರ ಅಸ್ಥಿಯನ್ನು 'ಆತ್ಮಾರಾಮ ಕರಂಡಿಕೆ' ಎಂದು ಕರೆಯಲಾಗುವ ಘಟದಲ್ಲಿ ಇಟ್ಟು ಇಲ್ಲಿಯೇ ಪೂಜಿಸಲಾಗುತ್ತಿತ್ತು. ತದನಂತರ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಕೂಡ ಇರಿಸಲಾಯಿತು. ಆರಂಭಕಾಲದಿಂದ, ೧೮೯೮, ಜನವರಿ ೧೪ ನೆಯ ತಾರೀಖಿನವರೆಗೂ, ಸುಮಾರು ನಲವತ್ತು ವರ್ಷಗಳ ಕಾಲ ಇಲ್ಲಿ ಶ್ರೀರಾಮಕೃಷ್ಣರ ಪೂಜಾರಾಧನೆ ನಡೆದುಕೊಂಡು ಬಂತು. ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರು ಮತ್ತು ಶ್ರೀರಾಮಕೃಷ್ಣರ ಹಲವಾರು ಪ್ರತ್ಯಕ್ಷಶಿಷ್ಯರು, ಇಲ್ಲಿ ಗುರುದೇವರನ್ನು ಪೂಜಿಸಿದ್ದಾರೆ. ನಾವು ಈಗ ಕಾಣುವ ಚಿತ್ರಗಳು ಆಮೇಲೆ ತಂದು ಇರಿಸಿರುವಂಥವು.

ಇದಕ್ಕೆ ಬಲಭಾಗದಲ್ಲಿ ಇರುವ ಕೋಣೆಯೇ 'ಮಹಾಪುರುಷ ಮಹಾರಾಜರ ಕೊಠಡಿ.' ಮೊದಲು ಇದು ಶ್ರೀರಾಮಕೃಷ್ಣರ ಶಯನಗೃಹವಾಗಿತ್ತು. ಸ್ವಾಮಿ ವಿವೇಕಾನಂದರು, ತಮ್ಮ ದೇಹವನ್ನು ಬಿಡುವ ದಿವಸ, ಇಲ್ಲಿ ಕುಳಿತು ಮೂರು ಗಂಟೆಗಳ ಕಾಲ ಧ್ಯಾನ ಮಾಡಿದರು. ಆಗ ಬಾಗಿಲು ಕಿಟಕಿಗಳನ್ನೆಲ್ಲ ಮುಚ್ಚಲಾಗಿತ್ತು. ಅಂದಿನ ದಿನದ ಅವರ ಚಟುವಟಿಕೆಗಳು ಉದ್ದೇಶಪೂರಿತವಾಗಿದ್ದವು ಮತ್ತು ಅರ್ಥವತ್ತಾಗಿದ್ದವು ಎಂದು ಹೇಳಬಹುದು. ಬೆಳಗ್ಗೆ ೮.೩೦ ಕ್ಕೆ ಸ್ವಾಮೀಜಿ ಪೂಜಾಮಂದಿರಕ್ಕೆ ಬಂದು ಧ್ಯಾನ ಮಾಡುತ್ತ ಅಲ್ಲಿ ಕುಳಿತುಕೊಂಡಿದ್ದರು. ಸ್ವಾಮಿ ಪ್ರೇಮಾನಂದರು ಗುರುದೇವರ ನಿತ್ಯಪೂಜೆ ಮಾಡಲೆಂದು ೯.೩೦ ಗಂಟೆಗೆ ಅಲ್ಲಿಗೆ ಆಗಮಿಸಿದರು. ಆಗ ಸ್ವಾಮಿ ವಿವೇಕಾನಂದರು, ಪಕ್ಕದಲ್ಲಿರುವ ಶ್ರೀರಾಮಕೃಷ್ಣರ ಶಯನಗೃಹದಲ್ಲಿ ತಮ್ಮ ಆಸನವನ್ನು ಹರಡುವಂತೆ ಅವರಿಗೆ ಹೇಳಿದರು. ಅದಲ್ಲದೆ ಎಲ್ಲ ಬಾಗಿಲುಗಳನ್ನು ಮತ್ತು ಕಿಟಕಿಗಳನ್ನು ಮುಚ್ಚಿಬಿಡುವಂತೆ ಆದೇಶಿಸಿದರು. ಅವರ ಧ್ಯಾನ ಪೂರ್ತಿ ಮೂರು ಗಂಟೆಗಳ ಕಾಲ ಸಾಗಿತು. ಅಲ್ಲಿ ಏನು ಜರುಗಿತು ಎನ್ನುವುದನ್ನು ಯಾರೂ ಕೂಡ ಯಾವತ್ತೂ ತಿಳಿಯಲಾರರು ಎಂದು ಅವರ ಜೀವನಚರಿತ್ರೆ ದಾಖಲಿಸುತ್ತದೆ.

ಮುಖ್ಯಮಂದಿರವನ್ನು ನಿರ್ಮಾಣ ಮಾಡಿದ ಮೇಲೆ, ಸ್ವಾಮಿ ಶಿವಾನಂದಜಿ ಮಹಾರಾಜರು ಉಪಯೋಗಿಸುತ್ತಿದ್ದ ಪರಿಕರಗಳನ್ನು ಇಲ್ಲಿ ತಂದು ಇಡಲಾಯಿತು. ಅದಕ್ಕೆಂದೇ ಈ ಕೊಠಡಿಯನ್ನು 'ಮಹಾಪುರುಷಜಿ ಅವರ ಕೊಠಡಿ' ಎಂದು ಕರೆಯುತ್ತಾರೆ.

ಇದಕ್ಕೆ ಬಲಭಾಗದಲ್ಲಿ ಅಥವಾ ದಕ್ಷಿಣ ಬದಿಯಲ್ಲಿ ಒಂದು ಹಜಾರವಿದೆ. ಸ್ವಾಮಿ ಶಿವಾನಂದರು, ಅಲ್ಲಿ ಶ್ರೀರಾಮಕೃಷ್ಣರು ಅಡ್ಡಾಡುತ್ತಿರುವಂತೆ ದರ್ಶನವನ್ನು ಪಡೆದರು. ಒಮ್ಮೆ ಯುವ ಸಂನ್ಯಾಸಿಯೊಬ್ಬರು, ಅಲ್ಲಿ ಬಿದ್ದಿದ್ದ ಮಳೆನೀರನ್ನು ಒರೆಸಿರಲಿಲ್ಲ. ಸ್ವಾಮಿ ಶಿವಾನಂದಜಿ ಅವನಿಗೆ ಬೈಯ್ದು ಹೀಗೆ ಹೇಳಿದರು: "ಮಗೂ, ಇದೆಂಥ ಸೇವೆಯಪ್ಪಾ! ಪ್ರತಿದಿನ ಸಂಜೆ ಶ್ರೀರಾಮಕೃಷ್ಣರು ಇಲ್ಲಿ ಅಡ್ಡಾಡುವುದನ್ನು ನಾನು ನೋಡುತ್ತಿದ್ದೇನೆ. ಅಲ್ಲಿ ನೀರು ಬಿದ್ದಿರುವುದರಿಂದ ಅವರಿಗೆ ನಡೆದಾಡಲು ಸಾಧ್ಯವಾಗುವುದಿಲ್ಲ. ಮಗೂ! ಅವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಯಾವಾಗಲೂ ನಡೆದುಕೋ. ಅವರೇ ನಮ್ಮ ಸರ್ವಸ್ವವಾಗಿದ್ದಾರೆ. ಅವರೇ ಜಗತ್ತಿನ ಆತ್ಮವೂ ಆಗಿದ್ದಾರೆ. ಅವರು ತೃಪ್ತಿಗೊಂಡರೆ, ಜಗತ್ತೂ ತೃಪ್ತಿಗೊಂಡಂತೆಯೇ!"

ನಾವು ಪೂಜಾಮಂದಿರದಿಂದ ಹೊರಬಂದು, ಮೆಟ್ಟಿಲುಗಳ ಬುಡದಲ್ಲಿ ನಿಂತುಕೊಂಡರೆ ಒಂದು ಮಾಳಿಗೆಗೆ (terrace) ಹೋಗುವ ಮರದ ಸಣ್ಣ ಮೆಟ್ಟಿಲುಗಳನ್ನು (lattice) ಕಾಣುತ್ತೇವೆ. ತಮ್ಮ ಕೊಠಡಿಯಿಂದ ಸ್ವಾಮೀಜಿ ಪೂಜಾಮಂದಿರಕ್ಕೆ ಈ ಮಾಳಿಗೆಯ ಮೂಲಕವೇ ಹೋಗುತ್ತಿದ್ದರು.

ಮೆಟ್ಟಿಲುಗಳೂ ಕೂಡ ಪವಿತ್ರ ಸ್ಮರಣೆಗಳಿಂದ ಸಮೃದ್ಧವಾಗಿವೆ. ಈ ಭೂಮಿಯಲ್ಲಿನ ತಮ್ಮ ಕಟ್ಟಕಡೆಯ ದಿವಸದ ಆ ಮುಂಜಾನೆ, ತಮ್ಮ ದೀರ್ಘಧ್ಯಾನದ ನಂತರ ಸ್ವಾಮೀಜಿ ಪೂಜಾಮಂದಿರದ ಹೊರಗೆ ಬಂದರು. ಮೆಟ್ಟಿಲುಗಳನ್ನು ಇಳಿಯುತ್ತಿರುವಾಗ, ಒಂದು ಗೀತೆಯು ಅವರ ತುಟಿಗಳಿಂದ ಹೊರಮೂಡುತ್ತಿತ್ತು. ಅವರ ಜೀವನಚರಿತ್ರೆಯು ಇದನ್ನು ಹೀಗೆ ದಾಖಲಿಸುತ್ತದೆ: "ಅವರ ಗುರುದೇವರು ಮತ್ತು ಜಗನ್ಮಾತೆ – ಸ್ವಾಮೀಜಿಯವರ ಸಾಕ್ಷಾತ್ಕಾರದಂತೆ ಒಂದೇ ಸಮಾನವಾದ ವ್ಯಕ್ತಿತ್ವವುಳ್ಳವರು – ಅವರ ಧ್ಯಾನದಲ್ಲಿ ಉಪಸ್ಥಿತರಿದ್ದಿರಬೇಕು. ಏಕೆಂದರೆ ಸ್ವಾಮೀಜಿ ತಮ್ಮ ಧ್ಯಾನವನ್ನು ಮುಗಿಸಿದ ಮೇಲೆ, ಉತ್ಕೃಷ್ಟ ಜ್ಞಾನವು ಪರಾಭಕ್ತಿಯೊಡನೆ ಮಿಳಿತಗೊಳ್ಳುವ ಗೀತೆಯೊಂದನ್ನು ಹಾಡಲಾರಂಭಿಸಿದರು. ಆ ಹಾಡು ಹೀಗಿತ್ತು: **'ನನ್ನ ತಾಯಿ ಶ್ಯಾಮಾ ಕಪ್ಪಗಿದ್ದಾಳೆಯೇ?'** (ಶ್ಯಾಮಾ ಮಾ ಕಿ ಅಮಾರ್ ಕಾಲೋ ರೇ)

ಹಳೆಯ ಪೂಜಾಮಂದಿರದ ಪಕ್ಕದಲ್ಲಿರುವ ಕಟ್ಟಡ ಕೂಡ (ಅದು ಈಗ ಬೇಲೂರು ಮಠದ ಮ್ಯಾನೇಜರ್ ಸ್ವಾಮೀಜಿ ಅವರ ಕಛೇರಿಯಾಗಿ ಮಾರ್ಪಟ್ಟಿದೆ) ಕೆಲವು ಉದಾತ್ತಜೀವಿಗಳ ಪುಣ್ಯಸ್ಮೃತಿಗಳಿಂದ ತುಂಬಿದೆ. ಇದು ಕೂಡ ಹಿಂದೆ ಇದ್ದ ಮಠದ ಒಂದು ಅಂಗವಾಗಿದ್ದಿತು. ಶ್ರೀರಾಮಕೃಷ್ಣರ ಬಹುತೇಕ ಎಲ್ಲ ಪ್ರತ್ಯಕ್ಷಶಿಷ್ಯರು ಹಾಗೂ, ಮಹಾಸಂಘದ ಎಂಟನೆಯ ಅಧ್ಯಕ್ಷರಾಗಿದ್ದ ಸ್ವಾಮಿ ವಿಶುದ್ಧಾನಂದರ ತನಕ ಎಲ್ಲ ಅಧ್ಯಕ್ಷ ಸ್ವಾಮೀಜಿಯವರು ಇಲ್ಲಿಯೇ ವಾಸವಾಗಿದ್ದರು. ಅವರೆಲ್ಲರೂ ತಮ್ಮ ಆಧ್ಯಾತ್ಮಿಕ ಸಿದ್ಧಿಗಳಿಗಾಗಿ ಬಹಳ ಗೌರವಾನ್ವಿತರಾಗಿದ್ದವರು. ಹೀಗೆ ಈ ಕಟ್ಟಡವು ಪುಣ್ಯಸ್ಮೃತಿಗಳ ದೇಗುಲವೇ ಆಗಿದೆ ಎಂದರೆ ತಪ್ಪಾಗಲಾರದು. ನಾವು ಮಾನಸಿಕವಾಗಿಯೇ ಆ ಎಲ್ಲ ಮಹಾಪುರುಷರಿಗೆ ವಂದಿಸಿ ಅವರ ಆಶೀರ್ವಾದವನ್ನು ಪಡೆದುಕೊಳ್ಳೋಣ.

ಈ ಕಟ್ಟಡ ಮತ್ತು ಹಳೆಯ ಪೂಜಾಮಂದಿರಗಳ ನಡುವಿನ ಪ್ರದೇಶದಲ್ಲಿ ಈಗ ಕೆಲವು ಕಛೇರಿಗಳಿವೆ. ಹಿಂದಿನ ದಿನಗಳಲ್ಲಿ ಇಲ್ಲಿ ದುರ್ಗಾಪೂಜೆಯನ್ನು ಮಾಡಲಾಗುತ್ತಿತ್ತು.

ನಾವೀಗ ಗಂಗೆಯ ಕಡೆಗೆ, ಮಠದ ಕಟ್ಟಡದ ದಕ್ಷಿಣದ ಬದಿಯಲ್ಲಿ, ಮುಂದುವರಿಯೋಣ. ಕಟ್ಟಡದ ಈ ಬದಿಯಲ್ಲಿ, ಮೊದಲ ಮಹಡಿಯಲ್ಲಿ ಇರುವ ಸ್ವಾಮಿ ವಿವೇಕಾನಂದರ ಕೊಠಡಿಗೆ ಹೋಗುವ ಮೆಟ್ಟಿಲುಗಳಿವೆ. ಮಠಕ್ಕೆ ಭೇಟಿಕೊಡುವ ಸಂದರ್ಶಕರು ಸ್ವಾಮೀಜಿಯವರ ಕೊಠಡಿಯನ್ನು ನೋಡಲು ಅನುವಾಗುವಂತೆ ಇದನ್ನು ಮುಂದೊಮ್ಮೆ ಸೇರಿಸಲಾಯಿತು.

### ಸ್ವಾಮಿ ವಿವೇಕಾನಂದರ ಕೊಠಡಿ

'ಧ್ಯಾನಸಿದ್ಧ' (ಬಾಲ್ಯದಿಂದಲೇ ಧ್ಯಾನದಲ್ಲಿ ನಿಷ್ಣಾತನಾದವನು) ಎಂದು ಶ್ರೀರಾಮಕೃಷ್ಣರೇ ಪ್ರಶಂಸೆ ಮಾಡಿದ್ದ ಮಹಾನ್ ಋಷಿವರ್ಯರು ನಿವಾಸ ಮಾಡಿದ ಪುಣ್ಯಸ್ಥಳವಿದು. ಸ್ವಾಮೀಜಿ ಯವರ ಕಾಲದಲ್ಲಿ ಈ ಕೊಠಡಿಯಲ್ಲಿ ಇಂದು ಕಾಣುವುದಕ್ಕಿಂತ ಕಡಮೆ ಪೀಠೋಪಕರಣಗಳು ಮತ್ತು ಇತರೆ ವಸ್ತುಗಳು ಇದ್ದವು. ಆದ್ದರಿಂದ ಆ ಕೊಠಡಿಯು ಈಗ ಕಾಣುವಂತೆ ತುಂಬಿಕೊಂಡಿರುವಂತೆ ಕಂಡುಬರುತ್ತಿರಲಿಲ್ಲ. ಸ್ವಾಮಿ ವಿವೇಕಾನಂದರು ಎಲ್ಲೆಗಳಿಲ್ಲದ ದಿವ್ಯಮಾನವ. ಹೀಗಾಗಿ ಅವರು ಸ್ವತಂತ್ರವಾಗಿ ಚಲಿಸುವ ವಾಯುವಿನಂತೆ ಮುಕ್ತವಾಗಿ ಬಾಳುತ್ತಿದ್ದರು ಮತ್ತು ಸಂಚರಿಸುತ್ತಿದ್ದರು. ವಿಶಾಲವಾಗಿದ್ದು, ಅಲ್ಪಸ್ವಲ್ಪವೇ ಪೀಠೋಪಕರಣಗಳಿರುವ ತಮ್ಮ ಕೊಠಡಿಯಲ್ಲಿ ನಿಶ್ಶಬ್ದವಾಗಿ ಕುಳಿತುಕೊಂಡೋ ಇಲ್ಲವೇ ಧ್ಯಾನಮಾಡುತ್ತಲೋ ಅವರು ಇರುವುದನ್ನು ನಾವು ಕಲ್ಪಿಸಿಕೊಳ್ಳಬಹುದು. ವಾಸ್ತವಸಂಗತಿಯೆಂದರೆ, ಈ ಕೊಠಡಿಯಲ್ಲಿ ಇಟ್ಟಿರುವ ಹಲವಾರು ವಸ್ತುಗಳು, ಅವರ ಜೀವನಕಾಲದ ನಂತರ ಅಲ್ಲಿ ತಂದು ಇಟ್ಟಿರುವಂಥವು. ದಿನಗಳು ಕಳೆದಂತೆ, ಸ್ವಾಮೀಜಿ ಉಪಯೋಗಿಸಿದ ಹಲವಾರು ಪರಿಕರಗಳು ಬೇಲೂರು ಮಠಕ್ಕೆ ಬಂದವು. ಬೇರೆ ಉತ್ತಮ ಸ್ಥಳದ ಅಭಾವದಿಂದ ಅವೆಲ್ಲವನ್ನೂ ಇಲ್ಲಿಯೇ ಸಂಗ್ರಹಿಸಿಡಲಾಯಿತು.

(ಮುಂದುವರಿಯುವುದು)

**_Statement about ownership and other particulars about Viveka Prabha (according to Form IV Rule 8, circulated by Registrar of Newspapers for India)._**

| | | |
|---|---|---|
| 1. Place of Publication | : | **Mysore 570 020** |
| 2. Periodicity of Publication | : | **Monthly** |
| 3. Printer's Name | : | **Swami Nityasthananda** |
| Nationality | : | **Indian** |
| Address | : | **President, Sri Ramakrishna Ashrama, Yadavagiri, Mysore 570 020.** |
| 4. Publisher's Name | : | **Swami Nityasthananda** |
| Nationality | : | **Indian** |
| Address | : | **President, Sri Ramakrishna Ashrama, Yadavagiri, Mysore 570 020** |
| 5. Editor's Name | : | **Swami Vireshananda** |
| Nationality | : | **Indian** |
| Address | : | **Sri Ramakrishna Ashrama Yadavagiri Mysore 570 020** |
| 6. Name & Addresses of the individuals who own the newspaper and partners or share-holders holding more than 1% of the capital | : | **President, Sri Ramakrishna Ashrama, Yadavagiri Mysore 570 020** |

**I, Swami Nityasthananda, hereby declare that the particulars given above are true to the best of my knowledge and belief.**

*Sd.*
*Swami Nityasthananda*
01.03.2010 Signature of the Publisher